


# ಸಂಸಾರ ಸಾಗರ!



ಮಿಜೋರಾಂನ ಬಕ್ತಾಂಗ್ ಎಂಬಲ್ಲಿ ವಾಸವಾಗಿರುವ ಝಿಯೋನಾ ಚಾನ್‌ನ ಸಂಸಾರವನ್ನು ನೋಡಿದವರೆಲ್ಲಾ ದಂಗಾಗುವುದು ಖಂಡಿತ. 66 ವರ್ಷದ ಈತನಿಗೆ ಬರೋಬ್ಬರಿ 39 ಹೆಂಡತಿಯರು, 94 ಮಕ್ಕಳು, 33 ಮೊಮ್ಮಕ್ಕಳು!

ಮತವೊಂದರ ಮುಖ್ಯಸ್ಥನಾದ ಈತನಿಗೆ ಬಹುಪತ್ನಿತ್ವಕ್ಕೆ ಅವಕಾಶ ಇದೆಯಂತೆ. 'ಹೊಸ ಪೀಳಿಗೆಯ ಮನೆ' ಎಂಬರ್ಥದ ಹೆಸರಿರುವ 100 ರೂಮುಗಳುಳ್ಳ ನಾಲ್ಕಂತಸ್ತಿನ ಮನೆಯಲ್ಲಿಯೇ ಈ ಕುಟುಂಬದ ಎಲ್ಲರೂ ವಾಸವಾಗಿದ್ದಾರೆ ಎನ್ನುವುದು ಮತ್ತೊಂದು ವಿಶೇಷ ಸಂಗತಿ. ಮನೆಯ ಸದಸ್ಯರ ಕೋಣೆಗಳು ಬೇರೆ ಬೇರೆಯದಾಗಿದ್ದರೂ ಅಷ್ಟೂ ಜನರಿಗೆ ಅಡುಗೆ ಮನೆ ಮಾತ್ರ ಒಂದೇ!

ಝಿಯೋನಾನ ಹಿರಿಯ ಹೆಂಡತಿ ಝಿಥಿಯಾಂಗಿಳದ್ದೇ ಅಡುಗೆ ಹಾಗೂ ಇನ್ನಿತರ ಗೃಹಕೃತ್ಯದ ಉಸ್ತುವಾರಿ. ಸಂಜೆಯ ಊಟಕ್ಕೆ 30 ಕೋಳಿಗಳು, 60 ಕೆ.ಜಿ ಆಲೂಗಡ್ಡೆ, 100 ಕೆ.ಜಿ ಅಕ್ಕಿ ಬೇಕಾಗುತ್ತದಂತೆ. 'ನಾನು ದೇವರ ವರ ಪುತ್ರ. ನನ್ನನ್ನು ನೋಡಿಕೊಳ್ಳಲೆಂದೇ ಆತ ಬಹಳಷ್ಟು ಜನರನ್ನು ಕರುಣಿಸಿದ್ದಾನೆ. 39 ಹೆಂಡಂದಿರ ಗಂಡನಾದ ನಾನು ಅದೃಷ್ಟಶಾಲಿ' ಎನ್ನುತ್ತಾನೆ ಜಿಯೋನಾ. ವಿಶ್ವದ ಅತ್ಯಂತ ದೊಡ್ಡ ಕುಟುಂಬದ ಯಜಮಾನ ಈತ ಎನ್ನುವುದಂತೂ ನಿಜ. ಅಂದ ಹಾಗೆ, ಝಿಯೋನಾ ಇನ್ನಷ್ಟು ಹೆಂಡತಿಯರನ್ನು ಹೊಂದಲು ಈಗಲೂ ರೆಡಿ ಇದ್ದಾನಂತೆ!

■ ವಿದ್ಯಾ ಹಾಲಬಾವಿ